# ದಂತಕಥೆಯಾದ ಹಿರಿಜೀವ!

■ ಪ್ರವೀಣ ಕುಲಕರ್ಣಿ

ಯುರೋಪಿನಲ್ಲೀಗ ಅತ್ಯಂತ ಹಿರಿಯ ವಯಸ್ಸಿನ ವ್ಯಕ್ತಿ ಯಾರು? ಈ ಪ್ರಶ್ನೆಗೆ ಥಟ್ಟಂತ ಉತ್ತರವಾಗಿ ಸಿಗುವ ಹೆಸರು ಫ್ರಾನ್ಸ್‌ನ ಸನ್ಯಾಸಿನಿ ಸಿಸ್ಟರ್ ಆಂಡ್ರೆ ಅವರದು. ಕಳೆದ ವಾರವಷ್ಟೇ 117ನೇ ಜನ್ಮದಿನ ಆಚರಿಸಿಕೊಂಡಿರುವ ಅವರು, ಅದಕ್ಕಿಂತ ಕೆಲವೇ ದಿನಗಳ ಮೊದಲು ಕೋವಿಡ್–19 ಕಾಯಿಲೆ ಪೀಡಿತರಾಗಿ ಚೇತರಿಸಿಕೊಂಡವರು. ಜಗತ್ತಿನ ಎರಡೂ ಮಹಾಸಮರಗಳಿಗೆ ಸಾಕ್ಷಿ ಆದವರು. 1918ರಲ್ಲಿ ಯುರೋಪ್ ಅನ್ನು ಕಾಡಿದ ಸಾಂಕ್ರಾಮಿಕ ಕಾಯಿಲೆಯ ಬಿಸಿಯನ್ನೂ ಅನುಭವಿಸಿದವರು. ಎಲ್ಲವನ್ನೂ ಮರೆತು ಮೊನ್ನಿನ ಬರ್ತ್‌ಡೇ ಪಾರ್ಟಿಯಲ್ಲಿ ತಮ್ಮ ಇಷ್ಟದ ಬೇಕ್ಡ್ ಅಲಸ್ಕಾವನ್ನು (ಐಸ್‌ಕ್ರೀಂ ಮತ್ತು ಕೇಕ್‌ನ ಮಿಶ್ರಣದ ಸಿಹಿತಿನಿಸು) ಚಪ್ಪರಿಸಿ ಸವಿದವರು.

ಫ್ರಾನ್ಸ್‌ನ ಟೂಲಾನ್ ಪಟ್ಟಣದಲ್ಲಿ ವಾಸವಾಗಿರುವ ಈ ಅಜ್ಜಿಯ ಮೂಲಹೆಸರು ಲೂಸಿಲಿ ರ್‍ಯಾಂಡನ್ ಎಂದು. 1904ರ ಫೆಬ್ರುವರಿ 11ರಂದು ಜನಿಸಿದ ಅವರು, ಬೆಳೆದು ದೊಡ್ಡವರಾದ ಮೇಲೆ ಆಯ್ದುಕೊಂಡಿದ್ದು ಸೇವೆಯ ಹಾದಿಯನ್ನು. ಟೂಲಾನ್‌ನ ವಿಶ್ರಾಂತ ಸನ್ಯಾಸಿನಿಯರ ಮನೆಯಲ್ಲಿ ಸದ್ಯ ನೆಲೆ ಕಂಡುಕೊಂಡಿರುವ ಅವರು, ಕಳೆದ ತಿಂಗಳಷ್ಟೇ ಕೊರೊನಾ ವೈರಾಣುವಿನಿಂದ ಸೋಂಕಿತರಾಗಿದ್ದರು.



ಆಂಡ್ರೆ ಅಜ್ಜಿ ಒಬ್ಬರೇ ಅಲ್ಲ; ಸನ್ಯಾಸಿನಿಯರ ಗೃಹದಲ್ಲಿದ್ದ 88 ಜನರ ಪೈಕಿ 81 ಮಂದಿ ಸೋಂಕುಪೀಡಿತರಾಗಿದ್ದರು. ಅವರಲ್ಲಿ 11 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದರು. ಆದರೆ, ಈ ಅಜ್ಜಿ ಕೋವಿಡ್ ಅನ್ನೇ ಹಿಮ್ಮೆಟ್ಟಿಸಿ, ಬೊಚ್ಚು ಬಾಯಿಯಲ್ಲಿಯೇ ಒಂದು ಗೆಲುವಿನ ನಗೆ ಬೀರಿದವರು. 'ನನಗೂ ಸೋಂಕು ತಗುಲಿತ್ತಂತೆ. ಸ್ವಲ್ಪ ಸುಸ್ತು ಆಗುತ್ತಿದ್ದುದು ನಿಜ. ಆದರೆ, ನಾನು ಕಾಯಿಲೆಪೀಡಿತೆ ಎನ್ನುವುದು ನನಗೆ ಗೊತ್ತಿರಲಿಲ್ಲ' ಎಂದು ಮಂದಹಾಸ ಬೀರುತ್ತಾರೆ ಈ ಅಜ್ಜಿ. 'ಪ್ರತಿದಿನ ನಾನು ಒಂದು ಪುಟ್ಟ ಲೋಟದಷ್ಟು ವೈನ್ ಕುಡಿಯುವೆ. ಅದು ನನ್ನನ್ನು ಬೆಚ್ಚಗೆ ಇಡುತ್ತದೆ' ಎನ್ನುತ್ತಾರೆ ಆಕೆ.

ಫ್ರಾನ್ಸ್‌ನ ಅಲೆಸ್ ಎಂಬಲ್ಲಿ ಪ್ರೊಟೆಸ್ಟೆಂಟ್ ಕುಟುಂಬದಲ್ಲಿ ಜನಿಸಿದ ಅವರು, ಮೂವರು ಸಹೋದರರ ನಡುವೆ ಬೆಳೆದ ಏಕೈಕ ಬಾಲಕಿ. ಮೊದಲ ಜಾಗತಿಕ ಮಹಾಸಮರದ ನೆನಪುಗಳಲ್ಲಿ ಅವರ ಮನದಂಗಳದಲ್ಲಿ ಇನ್ನೂ ಹಸಿರಾಗಿವೆ. 'ನನ್ನ ಇಬ್ಬರು ಸಹೋದರರೂ ಸಮರದಲ್ಲಿ ಭಾಗಿಯಾಗಿದ್ದರು. ಯುದ್ಧವೆಂದರೆ ಸತ್ತ ಸುದ್ದಿಗಳ ಟೆಲಿಗ್ರಾಂ ಸಂದೇಶಗಳೇ ಬರುವುದು ಸಾಮಾನ್ಯವಲ್ಲವೇ? ಆದರೆ, ಯುದ್ಧ ಮುಗಿದ ಬಳಿಕ ನನ್ನ ಸಹೋದರರಿಬ್ಬರೂ ಸುರಕ್ಷಿತವಾಗಿ ಮರಳಿದ್ದು ನಮ್ಮ ಮನೆಯಲ್ಲಿ ಸಂಭ್ರಮವನ್ನು ಹೆಚ್ಚಿಸಿತ್ತು' ಎಂದು ಅವರು ನೆನೆಯುತ್ತಾರೆ.

ಪ್ರೊಟೆಸ್ಟೆಂಟ್‌ನಿಂದ ಕ್ಯಾಥೋಲಿಕ್‌ಗೆ ಮತಾಂತರಗೊಂಡ ಅವರು, ತಮ್ಮ 26ನೇ ವಯಸ್ಸಿನಲ್ಲಿ ಸನ್ಯಾಸಿನಿಯಾಗಿ ದೀಕ್ಷೆಯನ್ನು ಪಡೆದರು. ವಿಂಚಿ ಎಂಬಲ್ಲಿ ಆಸ್ಪತ್ರೆಯ ಸೇವಾ ವಿಭಾಗದ ಹೊಣೆಹೊತ್ತ ಅವರು, ಅಲ್ಲಿಯೇ 31 ವರ್ಷಗಳವರೆಗೆ ಸೇವೆಯನ್ನೂ ಸಲ್ಲಿಸಿ, ನಿವೃತ್ತರಾದರು. ಬಳಿಕ ಸನ್ಯಾಸಿನಿಯರ ಗೃಹ ಸೇರಿದರು. ಯಾರೇ ಈ ಅಜ್ಜಿಯನ್ನು ಮಾತನಾಡಿಸಲು ಬರಲಿ, 'ನಿಮ್ಮೊಂದಿಗೆ ಬದುಕಿರಲು ಅವಕಾಶ ಸಿಕ್ಕಿರುವುದಕ್ಕೆ ಸಂತಸವಾಗುತ್ತದೆ' ಎಂದು ಎದುರಿಗಿದ್ದವರ ಜೀವನೋತ್ಸಾಹವನ್ನು ಹೆಚ್ಚಿಸುತ್ತಾರೆ ಅಜ್ಜಿ.

'ಸಾವಿನ ಕುರಿತು ಯಾವುದೇ ಅಂಜಿಕೆ ಇಲ್ಲ. ಇಂದಲ್ಲ, ನಾಳೆ ಹೋಗಲೇಬೇಕು. ನನ್ನ ಅಮ್ಮ, ಅಜ್ಜಿ, ಸಹೋದರರನ್ನೆಲ್ಲ ಸೇರಬೇಕು. ಆದರೆ, ಉಸಿರು ಇರುವಷ್ಟು ಕಾಲ ಬದುಕಿನ ಪ್ರತೀ ಕ್ಷಣವನ್ನೂ ನಾನು ಆನಂದಿಸುತ್ತೇನೆ' ಎಂದು ಸಮಚಿತ್ತದಿಂದ ಅವರು ಹೇಳುತ್ತಾರೆ. ಅಜ್ಜಿಯ ಕಣ್ಣುಗಳು ಈಗ ದೃಷ್ಟಿ ಭಾಗ್ಯವನ್ನು ಕಳೆದುಕೊಂಡಿವೆ. ಸದಾ ಗಾಲಿಕುರ್ಚಿಯ ಮೇಲೆಯೇ ಇರುತ್ತಾರೆ. ಕೆಲವೊಮ್ಮೆ ಏಕಾಂಗಿ ಭಾವ ಕಾಡುವುದುಂಟು ಎಂದು ಹೇಳುವ ಈ ಅಜ್ಜಿ, ಜೀವನ ಪ್ರೀತಿಯನ್ನು ಮಾತ್ರ ಎಂದಿಗೂ ಬತ್ತಿಸಿಕೊಂಡಿಲ್ಲ.

ಗೂಗಲ್‌ನಲ್ಲಿ ಹೆಚ್ಚು ಹುಡುಕಾಟ ಕಂಡ ಹೆಸರುಗಳಲ್ಲಿ ಈ ಅಜ್ಜಿಯದೂ ಒಂದಾಗಿದೆ. ಸಿಸ್ಟರ್ ಆಂಡ್ರೆ ಅವರ ಕುರಿತು ತಿಳಿದುಕೊಳ್ಳಲು ಬಯಸುವವರು ಅವರ ಊಟದ ವಿವರಗಳನ್ನೇ ಹೆಚ್ಚಾಗಿ ಕೆದಕಿರುವುದು ಕುತೂಹಲಕಾರಿ. ಹೌದು, ಅವರಿಗೆಲ್ಲ ದೀರ್ಘಾಯುಷ್ಯದ ಗುಟ್ಟನ್ನು ತಿಳಿದುಕೊಳ್ಳುವ ಉಮೇದು. ಹಾಗಾಗಿಯೇ ಅಜ್ಜಿಯ ಊಟದ ಜತೆ ಜತೆಗೆ ದಿನಚರಿ ವಿವರಗಳನ್ನೇ ಹೆಚ್ಚಾಗಿ ಹುಡುಕಿದ್ದಾರೆ.

ಜಪಾನಿನ ಕೇನ್ ತನಕಾ (118) ಅವರ ಬಳಿಕ ಜಗತ್ತಿನ ಎರಡನೇ ಅತ್ಯಂತ ಹಿರಿಯ ವಯಸ್ಸಿನ ಮಹಿಳೆ ಎಂಬ ಶ್ರೇಯ ಕೂಡ ಅವರದಾಗಿದೆ. ಅಂದಹಾಗೆ, ಪ್ರಪಂಚದಲ್ಲಿ ಸದ್ಯ ಅತ್ಯಂತ ಹಿರಿಯ ವಯಸ್ಸಿನ ಅಗ್ರ 20 ವ್ಯಕ್ತಿಗಳ ಪಟ್ಟಿಯಲ್ಲಿ ಇರುವವರೆಲ್ಲ ಮಹಿಳೆಯರೇ ಎನ್ನುವುದು ವಿಶೇಷ.

ಬರ್ತ್‌ಡೇ ಕೇಕ್ ಕತ್ತರಿಸಿ, ಬೇಕ್ಡ್ ಅಲಸ್ಕಾವನ್ನು ಈ ಅಜ್ಜಿ ಸವಿಯುವಾಗ ಯುವಪೀಳಿಗೆಗೆ ನಿಮ್ಮ ಸಂದೇಶ ಏನು ಎಂಬ ಪ್ರಶ್ನೆ ಎದುರಾಯಿತು. ಅಜ್ಜಿಯ ಉತ್ತರ ಸಿದ್ಧವೇ ಇತ್ತು: 'ಧೈರ್ಯಶಾಲಿಗಳಾಗಿ ಇರಿ, ನೊಂದವರ ಕುರಿತು ಸಹಾನುಭೂತಿ ಇರಲಿ'. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65